# ಶ್ರೀಕೃಷ್ಣ – ಸಂರಕ್ಷಣಾ ತಜ್ಞರ ತಜ್ಞ

◆ ಪ್ರೊ. ಎಂ.ಎನ್. ಗೋಪಾಲನ್

ಪ್ರತಿಯೊಬ್ಬ ಸಂರಕ್ಷಣಾ ತಜ್ಞರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪರಿಣಿತರಾಗಿರುತ್ತಾರೆ. ಕೆಲವು ಸಂರಕ್ಷಣಾ ತಜ್ಞರು ಕಟ್ಟಡಗಳ ಬಗ್ಗೆ ಅರಿತಿದ್ದರೆ, ಕೆಲವರು ಯಂತ್ರಗಳ ಬಗ್ಗೆ ಅರಿತಿರುತ್ತಾರೆ. ಇನ್ನು ಕೆಲವರು ದವಸ ಧಾನ್ಯಗಳ, ಹಣ್ಣುಗಳ, ಆಹಾರಗಳ ಬಗ್ಗೆ ಅರಿತಿರುತ್ತಾರೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ವಸ್ತುವಿನ ಸಂರಕ್ಷಣೆಯ ಬಗ್ಗೆ ಕೂಲಂಕಷವಾಗಿ ಯೋಚಿಸಿ, ನಂತರ ಆ ವಸ್ತುವನ್ನು ವಿರೂಪಗೊಳಿಸದೆ, ಹೇಗೆ ದೀರ್ಘಕಾಲ ಕಾಪಾಡಬಹುದು ಎಂದು ತರ್ಕಿಸಿ, ಸರಿಯಾದ ಸಲಹೆಯನ್ನು ಕೊಡುತ್ತಾರೆ. ಸದ್ಯಕ್ಕೆ, ಒಂದು ವಾಹನದಲ್ಲಿ ಅಳವಡಿಸಿರುವ ಚಕ್ರದ (ಟೈರ್) ಉದಾಹರಣೆಯನ್ನು ತೆಗೆದುಕೊಳ್ಳೋಣ. ಚಕ್ರ ಉಪಯೋಗಿಸಿದಷ್ಟೂ ಸವೆಯುತ್ತದೆ. ಅತಿಯಾಗಿ ಸವೆದ ಚಕ್ರವನ್ನು ಎಸೆಯಬೇಕಾಗುವುದು. ಆದರೆ, ಚಕ್ರವನ್ನು ಕಾಲ ಕಾಲಕ್ಕೆ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಂಡರೆ, ಚಕ್ರ ಬಹಳ ಕಾಲ ಬಾಳಿಕೆ ಬರುತ್ತದೆ. ಕೇವಲ ಕಾಲದ ಬಗ್ಗೆ ಗಮನ ನೀಡದೆ ಚಕ್ರ ಎಷ್ಟು ಸವೆದಿದೆ ಎಂಬುದರ ಮೇಲೆ ಸೂಕ್ತ ಪರಿಹಾರ ನಿರ್ಧರಿಸಬಹುದು. ಕೆಲವು ಸಲ, ಕಾಲ ಮಾತ್ರದಿಂದ ಉಚಿತವಾದ ನಿರ್ಧಾರಕ್ಕೆ ಬರಲು ಸಾಧ್ಯವಾಗುವುದಿಲ್ಲ. ಕಾರಣ, ಚಕ್ರ ಬಹಳಷ್ಟು ಕಾಲ ಉಪಯೋಗಿಸಲ್ಪಡದೇ ಹಾಗೇ ಇರಬಹುದು. ಆ ಸಮಯದಲ್ಲಿ ಚಕ್ರ ಸವೆಯುವುದಿಲ್ಲ. ಅದರೆ, ಚಕ್ರವು ಸರಿಯಾಗಿ ಉಪಯೋಗದಲ್ಲಿದ್ದರೆ, ಅದರ ಸವೆತದ ಪ್ರಮಾಣ ತಜ್ಞರು ಸಂಶೋಧನೆಯಿಂದ ತಿಳಿಸುವ ಸವೆತದ ಪ್ರಮಾಣದ ಮಟ್ಟಕ್ಕೆ ಸಮೀಪವಿರುತ್ತದೆ. ಚಕ್ರವನ್ನು ಬೇಕಾಬಿಟ್ಟಿಯಾಗಿ ಉಪಯೋಗಿಸಿದರೆ, ಅದು ತುಂಬ ಸವೆದು, ಮುಂದೆ ಆಗುವ ಅನಾಹುತದಿಂದ ತೀವ್ರ ನಷ್ಟ ಅನುಭವಿಸಬೇಕಾಗುತ್ತದೆ.

ಮೇಲೆ ಹೇಳಿದ ಉದಾರಹಣೆಯಿಂದ ಒಂದು ಅಂಶ ವ್ಯಕ್ತವಾಗುತ್ತದೆ. ಅದು ಏನೆಂದರೆ, ಸಂರಕ್ಷಣಾ ವಿಧಾನದಲ್ಲಿ ಎರಡು ರೀತಿಯ ಸಲಹೆಗಳು ಕಂಡುಬರುತ್ತವೆ. ಮೊದಲನೆಯದು, ವಸ್ತುವಿನ ತನ್ನ ಕಾಲ ಅಥವಾ ವಯಸ್ಸಿನ ಮೇಲೆ ನಿರ್ಧರಿಸಲ್ಪಟ್ಟ ಸಂರಕ್ಷಣಾ ಸೂತ್ರ. ಎರಡನೆಯದು ವಸ್ತುವಿನ ಸ್ಥಿತಿಯ ಮೇಲೆ ನಿರ್ಧರಿಸಲ್ಪಟ್ಟ ಸಂರಕ್ಷಣಾ ಸೂತ್ರ. ಮೊದಲನೆಯ ಸೂತ್ರಕ್ಕೆ 'ವಯೋನಿರ್ಣಯ ಸೂತ್ರ'ವೆಂದೂ, ಎರಡನೆಯ ಸೂತ್ರಕ್ಕೆ 'ಸ್ಥಿತಿನಿರ್ಣಯ ಸೂತ್ರ'ವೆಂದೂ ಹೆಸರಿಸಬಹುದು. ವಸ್ತುವಿನ ಸ್ಥಿತಿಯನ್ನು ನಾನಾ ರೀತಿಯಲ್ಲಿ ಅಳೆಯಬಹುದು. ಉದಾಹರಣೆಯಾಗಿ, ಒಂದು ಯಂತ್ರವು ಚಲಿಸುತ್ತಿರುವಾಗ ಚಲನಕ್ರಿಯೆಯು ಉತ್ಪತ್ತಿ ಮಾಡುವ ಶಾಖ, ಕಂಪನ, ಶಬ್ದ ಇತ್ಯಾದಿಗಳಿಂದ ಯಂತ್ರದ ಸ್ಥಿತಿಯನ್ನು ತಿಳಿಯಬಹುದು. ಇವುಗಳು ತಮ್ಮ ಪೂರ್ವನಿಯೋಜಿತ ಮೇರೆಯನ್ನು ಮೀರಿದರೆ, ವಸ್ತುವನ್ನು ಸ್ಥಿತಿನಿರ್ಣಯ ಸೂತ್ರದ ಪ್ರಕಾರ ಸಂರಕ್ಷಿಸಬಹುದು.

## ಪರಿಸರ ಸಂರಕ್ಷಣೆ

ಪರಿಸರ ಸಂರಕ್ಷಣೆ ಜೀವಕೋಟಿಗೆ ವರದಾನವಾಗಿ ಪರಿಣಮಿಸುವುದು ಎಂದರೆ ತಪ್ಪಾಗಲಾರದು. ಜೀವ ಕೋಟಿಯ ಅಳಿವು–ಉಳಿವು ಪರಿಸರವನ್ನು ಅವಲಂಬಿಸಿದೆ. ಮಾನವನು ಪರಿಸರ ಮಾಲಿನ್ಯಕ್ಕೆ ಮುಖ್ಯ ಕಾರಣ. ಮಲಿನಗೊಳ್ಳದೆ ಸ್ವಚ್ಛವಾಗಿದ್ದ ಪರಿಸರ ಈಚೀಚೆಗೆ ನಾಗರಿಕತೆಯ ಹೆಸರಿನಲ್ಲಿ ಮಾನವನ ದೌರ್ಜನ್ಯಕ್ಕೊಳಗಾಗಿ ಜೀವಕೋಟಿಗೆ ಮೃತ್ಯುವಾಗಿ ಪರಿಣಮಿಸುತ್ತಿದೆ. ಈ ದೌರ್ಜನ್ಯ ಹೀಗೆ ಇನ್ನೂ ನಡೆದರೆ, ಜೀವಕೋಟಿಯ ಮಾರಣ ಹೋಮ ಖಂಡಿತ. ಆ ಅಗ್ನಿಕುಂಡದಲ್ಲಿ ಪ್ರಕೃತಿಯ ಶಿಶುವಾದ ಮಾನವನೂ ಸಹ ಆಹುತಿಯಾಗುತ್ತಾನೆ ಎಂಬುದರ ಅರಿವು ಮಾನವನಿಗೆ ಇಲ್ಲ. ತಿಳಿದವರೂ ಅರಿವಿಲ್ಲದವರಂತೆ ನಡೆಯುತ್ತಿರುವುದು ಒಂದು ವಿಪರ್ಯಾಸವೇ ಸರಿ. ಇದರ ಬಗ್ಗೆ ಪರಿಸರತಜ್ಞರು ಸಾಕಷ್ಟು ಚಿಂತನೆ ಮಾಡಿದ್ದಾರೆ. ಪ್ರಕೃತಿಮಾತೆಯನ್ನು ವಿರೂಪಗೊಳಿಸಬಾರದೆಂಬ ಎಚ್ಚರಿಕೆಯನ್ನು ನೀಡಿದ್ದಾರೆ. ಪ್ರಕೃತಿ ಮಾತೆಯು ತನ್ನ ಕಂದಮ್ಮಗಳೊಡಗೂಡಿ ಸಂತಸದಿಂದ ಇರಬೇಕಾದರೆ, ಮಾನವನು ಪ್ರಕೃತಿದತ್ತವಾದ ಗಾಳಿ, ನೀರುಗಳನ್ನು ಅಶುದ್ಧಗೊಳಿಸಬಾರದು, ಶಬ್ದ ಮಾಲಿನ್ಯವನ್ನೂ ನಿಲ್ಲಿಸಬೇಕು.

ಈಚೀಚೆಗೆ ಮಾನವನು ಅಣ್ವಸ್ತ್ರಗಳ ಪರೀಕ್ಷೆಯಿಂದ ಇಡೀ ವಾತಾವರಣವನ್ನೇ ಹದಗೆಡಿಸಿದ್ದಾನೆ. ಈ ಪರೀಕ್ಷೆಗಳಿಂದ ಹೊರಹೊಮ್ಮುವ ಭಯಂಕರ ಕಿರಣಗಳು ಮಾನವಕುಲವನ್ನು ಅಪಾಯಕ್ಕೊಡ್ಡಿವೆ. ಅವುಗಳಿಂದ ಉಂಟಾಗುವ ರೋಗಗಳು ಮುಂದೆ ಬರುವ ಜೀವಕೋಟಿಗೆ ಮಾರಕವಾಗುವುವು. ಮಾನವನು ಎಚ್ಚೆತ್ತುಕೊಳ್ಳದಿದ್ದರೆ, ಅವನ ಮೃತ್ಯುವನ್ನು ಅವನೇ ಶೀಘ್ರದಲ್ಲೇ ಸ್ವಾಗತಿಸಬೇಕಾಗುತ್ತದೆ. ಇದು ಎಂತಹ ವಿಪರ್ಯಾಸ! ವಿಜ್ಞಾನದ ಹೆಸರಿನಲ್ಲಿ ಪ್ರಕೃತಿಯನ್ನು ವಿರೂಪಗೊಳಿಸಲು ಹೊರಟಿರುವ ಮಾನವನು ದಾನವನೇ ಸರಿ.

ತಂತ್ರಜ್ಞಾನದಲ್ಲಿ ವಿಶೇಷ ಪರಿಣತಿ ಹೊಂದಿ, ಹಲವಾರು ಪ್ರಸಿದ್ಧ ಸಂಸ್ಥೆಗಳಲ್ಲಿ ತಜ್ಞರಾಗಿ ಸೇವೆ ಸಲ್ಲಿಸುತ್ತಿರುವ, ಮೈಸೂರು ನಿವಾಸಿಗಳಾದ ಪ್ರೊ. ಗೋಪಾಲನ್ ಅವರು ಶ್ರೀಕೃಷ್ಣನ ಉಪದೇಶಗಳಲ್ಲಿ ಬರುವ, ಪರಿಸರಕ್ಕೆ ಸಂಬಂಧಪಟ್ಟ ಭಾವನೆಗಳನ್ನು ಸರಳವಾಗಿ ವ್ಯಕ್ತಪಡಿಸಿದ್ದಾರೆ.

ತನ್ನ ಕೈಯಿಂದಲೇ ತನ್ನ ನಾಶವನ್ನು ಸೃಷ್ಟಿಸಿಕೊಳ್ಳುತ್ತಿರುವ ಮಾನವನ ಮತಿಗೇಡಿತನವನ್ನು ವಿವರಿಸುವುದಾದರೂ ಹೇಗೆ? ಇದೊಂದು ತರಹದ 'ಟೈಂ ಬಾಂಬ್'. ಅದು ಸಿಡಿದು ಮಾನವ ಕುಲದೊಂದಿಗೆ ಮತ್ತಿತರ ಜೀವಗಳು ಎಂದು ನಿರ್ನಾಮವಾಗುವುವೋ ಗೊತ್ತಿಲ್ಲ. 'ವಿನಾಶಕಾಲೇ ವಿಪರೀತ ಬುದ್ಧಿಃ' ಎಂಬ ಹಿರಿಯರ ಮಾತು ಎಷ್ಟು ಸತ್ಯ!

ಶ್ರೀಕೃಷ್ಣನನ್ನು 'ಸ್ಥಿತಿನಿರ್ಣಯ ಸೂತ್ರ'ವನ್ನು ಅನುಸರಿಸುವ ಸಂರಕ್ಷಕನೆಂದು ಪರಿಗಣಿಸಬಹುದು. ಇಲ್ಲಿ ಧರ್ಮಚಕ್ರ ಸವೆದು ಅದರಿಂದಾಗುವ ದುಷ್ಪರಿಣಾಮವನ್ನು ತಡೆಯಲು ಶ್ರೀಕೃಷ್ಣ ಸನ್ನದ್ಧನಾಗುತ್ತಾನೆ. ಅಧರ್ಮದಿಂದ ಧರ್ಮಚಕ್ರವು ಸವೆಯುತ್ತದೆ. ಧರ್ಮಚಕ್ರವು ಸರಿಯಾಗಬೇಕಾದರೆ, ಪರಮಾತ್ಮನೇ ಮುಂದೆ ಬರಬೇಕು. ಮಾನವನ ಜೀವನದ ಲಕ್ಷ್ಯವನ್ನು ಸರಿಪಡಿಸಿ ಧರ್ಮಕ್ಕೆ ಹೊಸ ತಿರುವನ್ನೇ ಕೊಡುತ್ತಾನೆ. ಎಲ್ಲ ಸಂಪ್ರದಾಯಗಳನ್ನೂ ಒಗ್ಗೂಡಿಸಿ ಮೊದಲ ಬಾರಿಗೆ ಎಲ್ಲ ಮಾರ್ಗಗಳನ್ನೂ ಸಮನಾಗಿ ಸ್ವೀಕರಿಸಿದ ದಿವ್ಯ ವ್ಯಕ್ತಿ ಶ್ರೀಕೃಷ್ಣ. **ಯೇ ಯಥಾ ಮಾಂ ಪ್ರಪದ್ಯಂತೇ..** ಇತ್ಯಾದಿ– *ಯಾರು ನನ್ನನ್ನು ಯಾವ ರೀತಿಯಲ್ಲಿ ಆಶ್ರಯಿಸುವರೋ–* ನೋಡಿ ಇಲ್ಲಿ ಶ್ರೀಕೃಷ್ಣ ಸ್ಥಿತಿಗೆ ಕಾರಣನಾಗಿ ಸಮಾಜವನ್ನು ಹಿಡಿದಿಡುವ ಸೂತ್ರವಾಗಿದ್ದಾನೆ.

ಶ್ರೀಕೃಷ್ಣನನ್ನು ಓರ್ವ ಪರಿಸರ ತಜ್ಞನೆಂದು ಪರಿಗಣಿಸಬಹುದು. ಪರಿಸರ ಮಾಲಿನ್ಯವಾಗುವುದು ಪ್ರಕೃತಿಯಲ್ಲಿರುವ ಗಾಳಿ, ನೀರುಗಳಿಂದಲ್ಲ. ಪರಿಸರಕ್ಕೆ ಬೇರೊಂದು ಆಯಾಮ ವಿದೆ. ಮಾನವನ ಮನಸ್ಸು ಮಲಿನಗೊಂಡಾಗ ಆಸೆಗಳು ಅತಿಯಾದಾಗ,ಅವನು ಪ್ರಕೃತಿಯ ಶೋಷಣೆಯನ್ನು ಮಾಡುತ್ತಾನೆ. ಸ್ವಾರ್ಥ, ಪೈಪೋಟಿಗಳಿಗೆ ಬಲಿಯಾಗಿ ಮಾನವ ಕೇವಲ ತನ್ನ ದೈಹಿಕ ಸುಖಕ್ಕಾಗಿ ಶ್ರಮಿಸಿ ಮಲಿನಗೊಳ್ಳುತ್ತಾನೆ. ಈ ಮಲಿನತೆಯನ್ನು ಆಧ್ಯಾತ್ಮಿಕ ಮಾರ್ಗದ ಸಾಧನೆ ಮಾತ್ರ ತೊಳೆಯಬಲ್ಲದು. ಆ ಮಾರ್ಗವನ್ನು ಶ್ರೀಕೃಷ್ಣನು ಗೀತೆಯಲ್ಲಿ ತೋರಿಸಿಕೊಟ್ಟಿದ್ದಾನೆ. ದೈವೀಗುಣಗಳನ್ನು ವಿವರಿಸಿ ಹೇಳುವುದರ ಮೂಲಕ ನಮ್ಮಲ್ಲಿರಬೇಕಾದ ನಿಜವಾದ ಸಂಪತ್ತುಗಳು ಯಾವುವು ಎಂಬುದನ್ನು ಸ್ಪಷ್ಟಪಡಿಸಿದ್ದಾನೆ. ಮಾನವನನ್ನು ಅಧಃಪತನದಿಂದ ಕಾಪಾಡಿ ತನ್ಮೂಲಕ ಪ್ರಕೃತಿ. ಪರಿಸರವನ್ನು ಕಾಪಾಡುವ ತಜ್ಞ ಶ್ರೀಕೃಷ್ಣ. ಎಲ್ಲ ವಸ್ತುಗಳನ್ನು ನಾನು ವ್ಯಾಪಿಸಿದ್ದೇನೆ ಎಂದು ಸಾರುತ್ತ ಚೈತನ್ಯ–ಜಡಗಳ ನಡುವಿನ ಅಂತರವನ್ನು ತೆಗೆದುಹಾಕಿ ಎಲ್ಲೆಡೆ ದೈವದ ಸ್ಪಂದನವನ್ನು ಕಾಣುವಂತೆ ಪ್ರಚೋದಿಸುತ್ತಾನೆ. ಇದಕ್ಕಿಂತ ಉತ್ತಮವಾದ ಸಂರಕ್ಷಣಾ ವಿಧಾನ ಇದೆಯೇ?

ಒಟ್ಟಿನಲ್ಲಿ, ಶ್ರೀಕೃಷ್ಣನು ಸಂರಕ್ಷಣಾ ತಜ್ಞರ ತಜ್ಞ ಎಂದು ಹೇಳಬಹುದು. ಅವನು ವಹಿಸುವ ಪಾತ್ರಗಳು ಹಲವಾರು. ಅವನು ಆಡುವ ನಾಟಕವನ್ನು ವೀಕ್ಷಿಸುವ ನಾವು ಪ್ರೇಕ್ಷಕರು ಮಾತ್ರ. ಅವನ ರಂಗಭೂಮಿ ಇಡೀ ವಿಶ್ವವನ್ನೇ ವ್ಯಾಪಿಸಿದೆ. ನಾವಾದರೋ ಈ ವಿಶ್ವದ ಒಂದು ಮೂಲೆಯಲ್ಲಿ ಕುಳಿತು ಅವನಾಡುವ ಲೀಲೆಯನ್ನು ನೋಡಿ ಆನಂದಿಸಬಹುದಷ್ಟೆ. ನಾಟಕವನ್ನು ಪೂರ್ಣವಾಗಿ ನೋಡುವ ಅದೃಷ್ಟ ನಮಗಿಲ್ಲ. ಕಾರಣ, ನಮ್ಮ ಮನಸ್ಸು ಸೀಮಿತ, ಸಂಕುಚಿತ. ಹಾಗೆಯೇ ಕಾಲವೂ ಸೀಮಿತ. ಶ್ರೀಕೃಷ್ಣ ನಮ್ಮ ಜೀವನವನ್ನು ಉನ್ನತಗೊಳಿಸುವ ಅವಕಾಶವನ್ನು ನೀಡುತ್ತ, ನಮ್ಮನ್ನು ಆಹ್ವಾನಿಸುತ್ತಿದ್ದಾನೆ. ಬನ್ನಿ! ಅವನ ಲೀಲೆಯಲ್ಲಿ ಭಾಗಿಗಳಾಗಿ ನಮ್ಮ ನಮ್ಮ ಪಾತ್ರವನ್ನು ಸಂಪೂರ್ಣ ಶ್ರದ್ಧೆ ಹಾಗೂ ಭಕ್ತಿಯಿಂದ ನೆರವೇರಿಸಿ ಸ್ಥಿತಿಯ ಪಾಲನೆಯಲ್ಲಿ ಒಂದಾಗೋಣ. *

### *'ಅಲಖ್ ನಿರಂಜನ'*

ಒಂದು ದಿವಸ, ದಕ್ಷಿಣೇಶ್ವರದ ತಮ್ಮ ಕೊಠಡಿಯಲ್ಲಿ ಕುಳಿತಿರುವಾಗ, ಶ್ರೀರಾಮಕೃಷ್ಣರು ದೇವದೇವಿಯರ ನಾಮಸ್ಮರಣೆ ಮಾಡುತ್ತಿದ್ದರು. ಈ ಸನ್ನಿವೇಶದ ಬಗ್ಗೆ 'ಮ' *ವಚನವೇದದಲ್ಲಿ* ಬರೆದಿದ್ದಾನೆ: "ಅನಂತರ ಅವರು '*ಅಲಖ್ ನಿರಂಜನ*' ಎಂದು ಮತ್ತೆ ಮತ್ತೆ ಹೇಳತೊಡಗಿದರು. *ನಿರಂಜನ* ಎಂಬ ದೇವರ ಹೆಸರು ಹೇಳುತ್ತ ಅಳತೊಡಗಿದರು. ಭಕ್ತರಿಗೂ ಕಣ್ಣೀರು ಬಂತು. ಕಣ್ಣುಗಳಲ್ಲಿ ನೀರು ತುಂಬಿಕೊಂಡು, "ನಿರಂಜನ! ಮಗೂ! ಬಾ ಇಲ್ಲಿ! ಇದನ್ನು ತಿನ್ನು! ತೆಗೆದುಕೋ! ನಿನಗೆ ತಿನ್ನಿಸಿ ಯಾವಾಗ ನನ್ನ ಜನ್ಮ ಸಾರ್ಥಕ ಮಾಡಿಕೊಳ್ಳುವೆನೋ? ನನಗಾಗಿ ನೀನು ಈ ಮಾನವ ರೂಪವನ್ನು ಧರಿಸಿರುವೆ" ಎಂದು ವಿಲಪಿಸಲಾರಂಭಿಸಿದರು.' ಬಹುಶಃ ಶ್ರೀರಾಮಕೃಷ್ಣರ ಈ ಪ್ರೀತಿಯ ಕರೆ ಅವರ ಯುವಭಕ್ತ ನಿರಂಜನನನ್ನು ತಲುಪಿರಬೇಕು. ಅವನು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಅವರನ್ನು ನೋಡುವುದಕ್ಕೆಂದು ಬಂದನು. ಭಾವಾವಿಷ್ಟರಾಗಿದ್ದ ಶ್ರೀರಾಮಕೃಷ್ಣರು ಅವನಿಗೆ 'ನೀನು ಇಂಥ ದಿನ ಇಂಥ ಸ್ಥಳದಲ್ಲಿ ಆ ಸೀಲಿಯವನ ಮನೆಯಲ್ಲಿ ವಾಸಿಸುತ್ತಿದ್ದೆ; ಇಂಥ ದಿನ ನೀನು ನಿನ್ನ ಡೆಪ್ಯುಟಿಯ ಕುದುರೆಯನ್ನು ಸವಾರಿ ಮಾಡಿದೆ; ಇಂಥ ಸ್ಥಳದಲ್ಲಿ ನಿನ್ನ ಬಿಲ್ಲುಬಾಣಗಳೊಡನೆ ನಿಂತಿದ್ದೆ' ಎಂದೆಲ್ಲ ಹೇಳಿದರು. ಶ್ರೀರಾಮಕೃಷ್ಣರಿಗೆ ತನ್ನ ಬಗ್ಗೆ ಎಲ್ಲವೂ ಗೊತ್ತು ಎಂಬುದು ನಿರಂಜನನಿಗೆ ಮನವರಿಕೆಯಾಯಿತು. ಅವನೂ ಕಣ್ಣೀರು ಸುರಿಸುತ್ತ 'ಸ್ವಾಮಿ, ಇಷ್ಟು ದಿನವೂ ನನಗೆ ನಿಮ್ಮನ್ನು ಅರಿತುಕೊಳ್ಳಲು ಆಗಿರಲಿಲ್ಲ' ಎಂದು ಅವರಿಗೆ ಶರಣಾದನು. ಆ ದಿನದಿಂದ ನಿರಂಜನನು ಶ್ರೀರಾಮಕೃಷ್ಣರನ್ನು ನೋಡಲು ಆಗಿಂದಾಗ್ಗೆ ಬರತೊಡಗಿದನು.

(ದೇವರೊಡನೆ ಬಾಳಿದವರು, ಪುಟ ೨೯೦)